‘ನವಿಲುಗರಿಯ ಬೇಲಿ’, ‘ನೀಲಿ ಚುಕ್ಕಿಯ ನೆರಳು’ ಕೃತಿಗಳ ಮೂಲಕ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡಿರುವ ಮಧುರಾಣಿ ಎಚ್.ಎಸ್. ಚಿತ್ರದುರ್ಗದವರು. ಬೆಂಗಳೂರು ಮತ್ತು ಮೈಸೂರಿನಲ್ಲಿ ಶಿಕ್ಷಣ ಪಡೆದರು. ಅವರು ಓದಿದ್ದು ಇಂಗ್ಲಿಷ್ ಸಾಹಿತ್ಯ. ಕಾವ್ಯ ಮತ್ತು ಪ್ರಬಂಧ ಅವರಿಗೆ ಇಷ್ಟವಾದ ಕ್ಷೇತ್ರಗಳು. ಪ್ರಸ್ತುತ ಮೈಸೂರಿನಲ್ಲಿ ಅಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಮುರಿಯುವುದಿಲ್ಲ. ಅವರ ಕ್ರೌರ್ಯಕ್ಕೆ ಎಂದೂ ಬದಲು ಹೇಳುವುದಿಲ್ಲ ಎಂತಹ ಸಮಯದಲ್ಲಿಯೂ ತನ್ನ ಸಹನೆಯ ಗಡಿಮೀರಿ ಅಸಂಬದ್ಧವಾಗಿ ನಡೆದುಕೊಳ್ಳುವುದಿಲ್ಲ. ಹೆಣ್ಣಾದವಳು ಹೀಗೆಯೇ ಇರಬೇಕೆಂಬ ಪಾಠ ಅವಳಿಗೆ ಅಜ್ಜಿ ಅಕ್ಕಮ್ಮನಿಂದಲೂ ಅಥವಾ ತಂದೆ ಕಂಠೀ ಜೋಯಿಸರಿಂದಲೂ ಆಗಿತ್ತೆಂದು ಕಥೆಯಲ್ಲಿ ಪುರಾವೆಗಳಿಲ್ಲ. ಬಹುಶಃ ಆಕೆ ಸ್ವಭಾವತಃ ಮೃದು ಹಾಗೂ ಸಜ್ಜನಳು. ತನ್ನ ಚೊಚ್ಚಲ ಬಾಣಂತನದಲ್ಲಿ ಮಗುವನ್ನು ನೋಡಲು ಬಂದ ಚೆನ್ನಿಗರಾಯನು ತಾನು ಹುಟ್ಟಿಸಿದ ಕಂದಮ್ಮನನ್ನು ಕೈಯಲ್ಲೂ ಮುಟ್ಟದೆ ಪ್ಲೇಗಿನ ಶೆಡ್ಡಿನ ಮನೆಯಲ್ಲೇ ಹೊಟ್ಟೆ ತುಂಬಾ ಬಿಸಿಬಿಸಿ ತುಪ್ಪದ ಊಟ ಉಂಡು ಹೊರಟು ನಿಂತಾಗ ತಾಯಿಯಾದ ಪುಟ್ಟ ನಂಜಮ್ಮನ ಮನಸಿನ ಮೇಲೆ ಎಷ್ಟು ದೊಡ್ಡ, ಎಂದೂ ಮಾಸದ ಗಾಯವಾಗಿರಬಹುದು? ಅದು ಗಂಡಾಗಿದ್ದರೂ ಅವನು ಎತ್ತಿಕೊಳ್ಳುತ್ತಿರಲಿಲ್ಲ ಎಂದೂ ಅವಳು ಬಲ್ಲಳು.

ಕಡೆಗೆ ಹೆತ್ತ ಮಕ್ಕಳನ್ನು, ಮನೆಯನ್ನು, ಸರ್ವಸ್ವವನ್ನು ಕಳೆದುಕೊಂಡು ನಿಚ್ಚಳವಾಗಿ ನಿಂತಾಗಲೂ ನಂಜಮ್ಮನೊಳಗಿನ ಧೀಃಶಕ್ತಿ ಕುಂದುವುದಿಲ್ಲ. ಅಥವಾ ಈ ಬದುಕನ್ನು ಬದುಕಿಯೇ ತೀರಬೇಕು ವಿನಃ ತಪ್ಪಿಸಿಕೊಂಡು ಓಡುವುದಕ್ಕೆ ತಾವಿಲ್ಲ ಎಂಬ ಸತ್ಯವನ್ನು ಅವಳು ಅರಗಿಸಿಕೊಂಡಿದ್ದಾಳೆ. ಇಂತಹ ಬದುಕಿನ ನಗ್ನಸತ್ಯವನ್ನು ಬದುಕಿಯೇ ತೋರಿಸುವ ಈ ಪಾತ್ರ ನನ್ನೊಳಗಿನ ಹೆಣ್ಣುದನಿಯನ್ನೇ ಪ್ರತಿಪಾದಿಸುವುದರಿಂದ ನಾನು ಈ ಪಾತ್ರವನ್ನು ಅಷ್ಟು ಪ್ರೀತಿಸುತ್ತೇನೋ, ಅಥವಾ ಓದಿದ ಎಲ್ಲರಿಗೂ ನಂಜಮ್ಮ ಅಷ್ಟೇ ಪ್ರೀತಿಪಾತ್ರಳೋ ಗೊತ್ತಿಲ್ಲ. ನೆಟ್ಟಗೆ ನಿಂತ ಮರವನ್ನು ಮೊದಲು ಕಡಿಯುತ್ತಾರೆ ಎಂಬುದು ನಾಣ್ಣುಡಿ. ಆದರೆ, ಈ ಕಥೆಯಲ್ಲಿ ಈಕೆಯು ತಗ್ಗಿದಷ್ಟೂ ತರಿದು ಹಾಕುವುದು ತೀರಾ ಅಮಾನುಷ ಎನಿಸುತ್ತದೆ. ಅಷ್ಟೊಂದು ನೋವುಂಡು ಬದುಕುವ ಅಗತ್ಯ ಇಲ್ಲವಾದರೂ ಇರಲೇಬೇಕೆಂಬ ಕಟ್ಟುಪಾಡಿನೊಳಗೆ ನಮ್ಮನ್ನು ನಾವು ಕಟ್ಟಿಹಾಕಿಕೊಳ್ಳುವುದು ಅಥವಾ ಬಿಡುಗಡೆಯೊಂದನ್ನು ಬಯಸದೆಯೇ ಇದ್ದುಬಿಡುವುದು ನಿಜದಲ್ಲಿ ಸಂಭವವೇ? ಇಲ್ಲಿ ನನಗೆ ಹುಟ್ಟುವ ಪ್ರಶ್ನೆಗಳೆಲ್ಲವೂ ಆ ಪಾತ್ರವನ್ನು ಚಿತ್ರಿಸಿರುವ ನೆಲೆಗಟ್ಟಿನಲ್ಲಿಯೇ ಹೊರತು, ಅದು ಹೀಗಿದ್ದಿದ್ದರೆ ಹೇಗಿರುತ್ತಿತ್ತು? ಎಂಬ ವಿಮರ್ಶೆಯ ಚೌಕಟ್ಟಿನೊಳಗಲ್ಲ. ನಂಜಮ್ಮನನ್ನು ಯಾಕಾಗಿ ಹಾಗೆ ಚಿತ್ರಿಸಿರಬಹುದು ಎಂಬ ಪ್ರಶ್ನೆಗೆ ಲೇಖಕರು ಮಾತ್ರವೇ ಉತ್ತರ ನೀಡಬಲ್ಲರು. ಮತ್ತು ಹಲವು ಬಾರಿ ಉತ್ತರವನ್ನು ಬಯಸುವುದೇ ಪ್ರಶ್ನೆಗಳ ಉದ್ದೇಶವಾಗಿರುವುದಿಲ್ಲ. ಅರಗಿದಂತೆ ಅರ್ಥೈಸಿಕೊಳ್ಳುವುದರಲ್ಲೂ ಅರ್ಥವಿದೆ. ನನಗೆ ನಂಜಮ್ಮನ ಪಾತ್ರ ಅರಗಿದಂತೆ ಅರ್ಥೈಸಿಕೊಳ್ಳುವುದರಲ್ಲಿ ಹಿತ ನೀಡುತ್ತದೆ. ಅದು ವಾಸ್ತವಕ್ಕೆ ತುಂಬಾ ಹತ್ತಿರವಾಗಿದೆ ಅನ್ನಿಸುತ್ತದೆ. ಅವಳಂತೆ ಇರಬೇಕೋ ಇರಬಾರದೋ ಅದು ನಂತರದ ಪ್ರಶ್ನೆ. ಅವಳು ಹಾಗಿದ್ದಳು ಎಂಬುದನ್ನು ಒಂದು ನೋವಿನ ರಾಗದಂತೆ ಅನುಭವಿಸುವುದು ಓದಿನ ಸುಖಕ್ಕೊಂದು ಕಚ್ಚಾ ನಿದರ್ಶನ. ಗಾಯಕನೊಬ್ಬನು ಒಂದು ರಾಗವನ್ನು ಹಾಡಿದರೆ ಅದೇ ರಾಗದ ಸ್ವರಗಳ ಆರೋಹ ಅವರೋಹಗಳ ಮೇಲೆ ನಾವು ಸಹ ಆ ಗಾಯನದಲ್ಲಿ ಮುಳುಗಿರುತ್ತೇವೆ. ಅಂತೆಯೇ ಕಥೆಗಾರನ ಪಾತ್ರವೂ ಏಕೆ ಹೀಗಿದೆ ಎಂಬ ಪ್ರಶ್ನೆ ನನಗೆ ಅಸಂಬದ್ಧವೆಂದು ತೋರುವುದು. ಕಥೆಗಾರನಿಗೆ ಹಾಗನಿಸಿತು, ಆ ಪಾತ್ರ ಹಾಗಿದೆ ಅಷ್ಟೇ. ನಂಜಮ್ಮನ ಪಾತ್ರವನ್ನು ಅಂತಹ ಓದುವ ಹಿತದೊಂದಿಗೆ ನಾನು ಸದಾ ನೆನೆಯಲು ಬಯಸುತ್ತೇನೆ. ಆ ನಿಟ್ಟಿನಲ್ಲಿ ‘ಗೃಹಭಂಗ’ ಒಂದು ಕಲಾತ್ಮಕ ಕುಸುರಿ ಕೆಲಸದ ಶಿಲ್ಪದಂತೆ ಅಸಾಮಾನ್ಯ ಹಾಗೂ ಅಪೂರ್ವ.●